ಶ್ರೀ ಎಸ್. ಎಂ. ಕೃಷ್ಣ .—ಇದನ್ನು ನಿಲ್ಲಿಸುವುದು, ತೆಗೆಯುವುದು ಒಂದು ಸಬ್ ಕಮಿಟಿಯನ್ನು ಏನು ನೇಮಿಸಿದ್ದೀನೆ, ಅದರ ತಜ್ಞರ ವರದಿ ಆಧಾರದ ಮೇಲೆ ಕಂಪನಿಯು ಒಂದು ನಿರ್ಧಾರಕ್ಕೆ ಬರ ಬೇಕಾಗುತ್ತದೆ.

ಶ್ರೀ ಎಸ್. ಎಂ. ಶ್ರೀರಾನಾಳಿ ಚಂದ್ರಶೇಖರ್ .—ಒಂದು ವೇಳೆ ಅವರು ನಿಲ್ಲಿಸಬೇಕು ಎಂದು ಅಭಿಪ್ರಾಯಪ್ಪಟ್ಟರೆ, ಅಲ್ಲಿ ಕೆಲಸ ಮಾಡುವ ಸಾವಿರಾರು ಜನರಿಗೆ ಬೇರೆ ಸೌಕರ್ಯ ಕಲ್ಪಿಸಿಕೊಡುವುದಕ್ಕೆ ತಾವು ತಯಾರಿದ್ದೀರಾ ?

ಶ್ರೀ ಎಸ್. ಎಂ. ಕೃಷ್ಣ .—ಮಾನ್ಯ ಸದಸ್ಯರ ಕಳಕಳಿಯನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ, ಅಲ್ಲಿಯ ಕೆಲಸಗಾರರು ಡಿಸ್‌ಪ್ಲೇಸ್ ಆಗದ ಹಾಗೆ ಕಂಪನಿಯವರು ನೋಡಿಕೊಳ್ಳುವುದಕ್ಕೆ ಪ್ರಯತ್ನ ಪಡುತ್ತಾರೆ.

ಶ್ರೀ ಕೋಣಂದೂರು ಲಿಂಗಪ್ಪ .—ತಣಿಗೆ ಬೈಲ್ ಸಿಂಟರಿಂಗ್ ಯಂತ್ರದಿಂದ ಸಾಕಷ್ಟು ಕಬ್ಬಿಣದ ಅದಿರು ಉತ್ಪತ್ತಿ ಆಗುತ್ತಿದ್ದಾಗ್ಯೂ ಇದನ್ನು ನಿಲ್ಲಿಸುವ ಸಂದರ್ಭ ಬರಬಹುದು ಎಂದು ಹೇಳಿದ್ದೀರಿ. ಟಾಟಾ ಐರನ್ ಅಂಡ್ ಸ್ಟೀಲ್ ವರ್ಕ್ಸ್ ಉತ್ಪಾದನೆಗೆ ಮತ್ತು ಅದರ ಮಾರ್ಕೆಟ್ಟಿಗೆ ತೊಂದರೆಯಾಗುತ್ತದೆ. ಎಂದು ಹೇಳಿ ಇದನ್ನು ನಿಲ್ಲಿಸುವುದಕ್ಕೆ ಶಿಫಾರಸ್ ಮಾಡುವ ಪ್ರಯತ್ನ ನೆಡೆದಿದೆ ಎಂದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಎಂ. ಕೃಷ್ಣ .—ಇದು ಶಂದ್ಧಾಂಗ ಸತ್ಯಕ್ಕೆ ದೂರವಾಗಿರತಕ್ಕ ಅಪಾದನೆ. ತಾತಾ ಕಂಪನಿಯವರು ಏನು ಮಾಡುತ್ತಾರೆ, ಭದ್ರಾವತಿ ಕಂಪನಿಯವರು ಏನು ಮಾಡಬೇಕು ಎಂದು ಒಂದ ಕೊಂದಕ್ಕೆ ಸಂಬಂಧ ಕಲ್ಪಿಸುವುದು ಸರಿಯಲ್ಲ. ಸಮ್ಮಲ್ಲಿ, ಭದ್ರಾವತಿ ಕಾರ್ಖಾನೆಯಲ್ಲಿ ಇರತಕ್ಕಂಥ ಎರಡು ಪಿಗ್ ಐರನ್ ಫರ್ನೇಸ್‌ನಲ್ಲಿ, ಒಂದನ್ನು ರೀ ಲೈನಿಂಗ್ ಗೋಸ್ಕರ ನವಂಬರ್ ೧೯೭೧ರಲ್ಲಿ ಕ್ಲೋಸ್ ಮಾಡಲಾಗಿದೆ. ಇನ್ನೊಂದು ಪಿಗ್ ಐರನ್ ಫರ್ನೇಸ್, ಸಿಂಟರಿಂಗ್ ಮಾಡತಕ್ಕಂಥಾದ್ದು ಅನ್‌ಎಕನಾಮಿ ಕಲ್ ಎಂದು ಕೆಲಸ ತಿಳಿದಿರತಕ್ಕಂಥವರು ಅಭಿಪ್ರಾಯ ಕೊಟ್ಟಿದ್ದರಿಂದ ಈ ಪರಿಸ್ಥಿತಿ ಉದ್ಭವವಾಗಿದೆ. ಅದಕ್ಕೆ ಮಿಗಿಲಾಗಿ ಇನ್ನು ಯಾವ ಅರ್ಥವನ್ನೂ ಕಲ್ಪಿಸಬೇಕಾಗಿಲ್ಲ.

ELECTRIFICATION OF VILLAGES IN SIRUGUPPA TALUK

911. SRI B. E. RAMAIAH .—(Siruguppa) .—Will the Minister for Public Works and Electricity be pleased to state :—

(*a*) the names of the villages in Siruguppa taluk where there is no supply of electricity :

(*b*) out of these villages, the names of the villages in respect of which estimates for supply of electricity have been prepared ;

(*c*) of these estimates, the number of estimates sanctioned :

(*d*) out of these villages, the names of the villages where the work relating to the supply of electricity has been started ?

SRI H. M. CHANNABASAPPA .—(Minister for Public Works) .—

(*a*) 58 as indicated in the list appended.

(*b*) Estimates in respect of the following 9 villages have been prepared :

1. Bandrahal
2. Siddrampura
3. Balkundi
4. Mudenur
5. Myalapur
6. Ibrahimpura
7. Kotchal Suguru
8. Bvrapura
9. Udegolum

(Sri H. M. Channabasappa).

(c) Estimates in respect of the following six villages have been sanctioned :

1. Siddrampura
2. Mudanur
3. Ibrahimpura
4. Kotechal Suguru
5. Byrapura
6. Udegolum

(d) Works has been taken up in respect of the following three villages :

1. Ibrahimpura
2. Kotchal Suguru
3. Byrapura

ಶ್ರೀ ಬಿ. ಇ. ರಾಮಯ್ಯ —ಮಾನ್ಯ ಮಂತ್ರಿಗಳು ೫೮ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲಾಗಿಲ್ಲ ಎಂದು ಹೇಳಿದ್ದಾರೆ. ಬರೀ ೨೬ ಹಳ್ಳಿಗಳಿಗೆ ಮಾತ್ರ ವಿದ್ಯುಚ್ಛಕ್ತಿಯನ್ನು ಒದಗಿಸಿದ್ದಾರೆ. ಈ ೫೮ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲು ಇನ್ನು ಎಷ್ಟು ವರ್ಷಗಳು ಬೇಕು ?

ಶ್ರೀ ಎಚ್. ಎಂ. ಚನ್ನಬಸಪ್ಪ .—ಎಷ್ಟು ಬೇಗ ಆಯಾ ಪಂಚಾಯತಿಯವರು ಅವರು ಕೈಗೊಳ್ಳಬೇಕಾದಂಥ ಕಾರ್ಯಕ್ರಮವನ್ನು ಸಮರ್ಪಕವಾಗಿ ಕೈಗೊಂಡು ಅಂದಾಜುಗಳ ಮೇಲೆ ವಿಧಿತವಾದ ಉತ್ಪತ್ತಿ ಸರ್ಕಾರಕ್ಕೆ ಬರುತ್ತದೋ ಅಷ್ಟಷ್ಟು ಬೇಗ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ಇ. ರಾಮಯ್ಯ .—೧೦—೧೫ ಪಂಚಾಯತಿಯವರು ಸರ್ಕಾರಕ್ಕೆ ಅರ್ಜಿಯನ್ನು ಬರೆದು ಕೊಂಡು ಎಲೆಕ್ಟ್ರಿಸಿಟಿಯನ್ನು ಸಪ್ಲೈ ಮಾಡಿ ಎಂದು ಹೇಳಿದರೂ ಕೂಡ ತಾವು ತಿಳಿಸಿದ ಪಟ್ಟಿಯಲ್ಲಿ ಆ ಹಳ್ಳಿಗಳ ಹೆಸರು ಇಲ್ಲ. ಅದಕ್ಕೆ ಏನು ಕಾರಣ ?

† ಶ್ರೀ ಎಚ್. ಎಂ. ಚನ್ನಬಸಪ್ಪ .—ಅವರು ಅರ್ಜಿ ಕೊಟ್ಟಾಕ್ಷಣ ಅವುಗಳನ್ನು ತೆಗೆದುಕೊಳ್ಳಬೇಕು ಎನ್ನುವ ಪ್ರಶ್ನೆಯಿಲ್ಲ. ಅವರು ಅರ್ಜಿಯನ್ನು ಕೊಡುವುದರ ಜೊತೆಗೆ, ಪಂಚಾಯತಿಯವರು ಲೋಡ್ ಸರ್ವೆ ಫಾರ್ಮ್‌ಗಳನ್ನು ಫಿಲ್‌ಅಪ್ ಮಾಡಿ ಅವರು ಕೈಗೊಳ್ಳಬೇಕಾದಂಥ ಕಾರ್ಯಗಳನ್ನು ಸಮರ್ಪಕವಾಗಿ ಕೈಗೊಂಡು ಅಂದಾಜು ಮಾಡಿದ ಮೇಲೆ, ಆ ಅಂದಾಜಿಗೆ ಏಳುವರೆ ಅಥವಾ ಐದು ಪರ್ಸೆಂಟ್ ಆಯಾ ಸ್ಥಳಕ್ಕೆ ಅನ್ವಯಿಸುವಂತೆ ಉತ್ಪತ್ತಿ ಬಂದರೆ ಮುಂದಿನ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯ.

ಶ್ರೀ ಬಿ. ಇ. ರಾಮಯ್ಯ.—ದೂರ ಇರತಕ್ಕ ಹಳ್ಳಿಗಳನ್ನು ತೆಗೆದುಕೊಳ್ಳಬಾರದು ಎಂದು ಸರ್ಕಾರದ ಅಭಿಪ್ರಾಯವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ .—ಅಲ್ಲಿ ಏಳೂವರೆ ಪರ್ಸೆಂಟ್ ಉತ್ಪತ್ತಿ ಬಾರದೆ ಹೋದ ಪಕ್ಷದಲ್ಲಿ ಎಲೆಕ್ಟ್ರಿಫಿಕೇಷನ್ ಮಾಡುವುದಕ್ಕೆ ಸಾಧ್ಯವಿಲ್ಲ.

HEALTH UNITS ESTABLISHED IN KALGI CONSTITUENCY

898. SRI PRABHAKAR TELKAR (Kalgi) .—Will the Minister for Health be pleased to state :—

(a) the No. of Health Units established in Kalagi Constituency together with the names of places ;